

# ನಾನೂ ನೀನೂ ಜೋಡೀ, ಜೀವನ ಎತ್ತಿನ ಗಾಡೀ...

ಟ್ರಾಫಿಕ್ಕು ಅದೂ ಇದೂ ಅಂತ ತನ್ನ ಉತ್ಕಂಠತೆಗೆ ತಾನೇ ಕಾರಣ ಕೊಟ್ಟುಕೊಳ್ಳುತ್ತ, ಅವಳಿಗೆ ಹನ್ನೆರಡು ಗಂಟೆಗೆ ಅಂತ ಹೇಳಿದವ ಸ್ವತಃ ಹನ್ನೊಂದು ಗಂಟೆಗೆ ಅಲ್ಲಿ ಬಂದು ಉಪಸ್ಥಿತನಾಗಿಬಿಟ್ಟಿದ್ದ. ಗಾಜಿನ ಗೋಡೆಯಲ್ಲಿ ಕಣ್ಣು ತೂರಿಸಿಕೊಂಡು ರಸ್ತೆಯ ಮೇಲಿನ ನಿರೀಕ್ಷೆಯಿಂದ, ಇನ್ನೂ ಸಮಯವಾಗಿಲ್ಲವೆಂದು ಅರಿವಿದ್ದರೂ, ವಿನಾಕಾರಣ ಕಾತರಿಸುತ್ತ ಕುಳಿತಿದ್ದ. ಸಿಟಿ ಸಾರಿಗೆ, ರಿಕ್ಷಾ, ಕಾರು, ಸ್ಕೂಟರು, ಪಾದಚಾರಿಗಳು, ತರಕಾರಿ ತಳ್ಳುಗಾಡಿಯವರು ಎಲ್ಲಾ ಸೇರಿಕೊಂಡ ನಿತ್ಯಜಾತ್ರೆಯ ಧಾಂಗುಡಿಯಲ್ಲಿ ಈಸ್ಟೆಂಡ್ ರಸ್ತೆ ವಿಲವಿಲ ಒದ್ದಾಡುತ್ತ ಥಪರಗುಟ್ಟುವುದು ಕಾಣಿಸುತ್ತಿತ್ತು. ವೇಟರ್ ಮತ್ತೆ ತನ್ನತ್ತ ಬರುವುದು ಕಾಣಿಸಿ ಹೆಚ್ಚುವರಿ ಹಣ ಕೊಟ್ಟು ರಿಸರ್ವ್ ಯಾಕೆ ಮಾಡತಾರೆ, ಇಷ್ಟೂ ತಿಳಿಯಲ್ವ? ಅಂತ ಕಿರಿಕಿರಿ ಪಟ್ಟುಕೊಂಡು 'ಇನ್ನೊಬ್ರು ಬರಬೇಕು, ಆಮೇಲೆ ಆರ್ಡರು ಮಾಡತೀನಿ' ಅಂತ ಸಾಗಹಾಕಿದ. ಕೈಯಲ್ಲಿಯ ಗುಲಾಬಿ ಬಣ್ಣದ ಪೆಟ್ಟಿಗೆಯನ್ನು ಅಕಾರಣ ಮೂರನೇ ಸಾರಿ ತೆಗೆದು ನೋಡಿದ. ಹೃದಯದಾಕಾರದ ಉಂಗುರ. ಚೂಪುತುದಿ ಬೀನಾಳ ಗಲ್ಲದಂತೇ ಇದೆ ಎಂಬ ಹೋಲಿಕೆ ಮೊದಲ ಬಾರಿ ಹೊಳೆದು ಪುಳಕಗೊಂಡ. ಇದ್ದಕಿದ್ದಂತೆ ಇಂತಹ ಭಾವುಕತೆ ತನ್ನಲ್ಲಿ ಅವಿರ್ಭಸಿದ್ದಕ್ಕೆ ಅಚ್ಚರಿಪಟ್ಟ. ಕವನಗಳಲ್ಲಿ ಬರುವ ಕಲ್ಪನೆಗಳು, ಕತೆಗಳಲ್ಲಿ ಹೇಳುವ ಮಾತುಗಳು ನಿಜಕ್ಕೂ ಪ್ರೇಮಿಗಳ ನಡುವೆ ನಡೆಯುತ್ತಾ? ಒಬ್ಬರನ್ನೊಬ್ಬರು ವರ್ಣನೆ ಮಾಡಿಕೊಂಡು ಲಲ್ಲೆಗರಿದು ಬೇಡಿಕೊಂಡು?



ಎಸ್.ವಿ ಹೂಗಾರ